# ಪರಕೀಯತೆ

**ಡಾ || ಹೆಚ್. ರಾಮಚಂದ್ರ ಸ್ವಾಮಿ**

ಆಧುನಿಕ ಸಂಪರ್ಕ ಮಾಧ್ಯಮಗಳ ಮೂಲಕ ಪ್ರಪಂಚ ಕಿರಿದಾಗುತ್ತಿದ್ದರೂ ಮಾನವ-ಮಾನವನ ನಡುವಿನ ಅಂತರ ಅಧಿಕವಾಗುತ್ತಿದ್ದು ಪರಕೀಯತೆಯ ಪ್ರಶ್ನೆ ತೀವ್ರವಾಗುತ್ತಿದೆ. ಈ ಲೇಖನದಲ್ಲಿ ಇದರ ವಿಶ್ಲೇಷಣೆ ನಡೆದಿದೆ. ಶ್ರೀ ರಾಮಚಂದ್ರ ಸ್ವಾಮಿಯವರು ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕರೂ ಬ್ರಿಟಿಷ್ ಇಕಾಲಾಜಿಕಲ್ ಸೊಸೈಟಿಯ ಗೌರವ ಸದಸ್ಯರೂ ಆಗಿರುವರು.

ಪರಕೀಯತೆಯ ಭಾವನೆ ಮಾನವನ ಮನಸ್ಸಿನಲ್ಲಿಯೇ ಅಡಗಿರುವ ಬಹು ದೊಡ್ಡ ಶತ್ರು. ಇದು ವೈಯಕ್ತಿಕವಾಗಿರಬಹುದು ಅಥವಾ ಸಾಮಾಜಿಕ, ರಾಜಕೀಯ ಸಹ ಆಗಿರಬಹುದು. ತನ್ನ ಜೀವನವನ್ನು ಮುನ್ನಡೆಸಲು ಅಗತ್ಯವಾದ ಅಂತಶ್ಶಕ್ತಿ ಇಲ್ಲದವನಿಗೆ ತಾನೇ ತನಗೆ ಅನ್ಯನಾಗಿ ಕಾಣಿಸಬಹುದು; ತಾನೇ ಬಾಳಿದ ತನ್ನ ಜೀವನದ ಸಂಗತಿಗಳೇ ವಿಚಿತ್ರವಾಗಿಯೂ ಅಸಂಭವವಾಗಿಯೂ ತೋರಬಹುದು; ತಾನು ಯಾರೆಂಬುದರ ಬಗ್ಗೆ ಕೂಡ ಎಚ್ಚರವಿಲ್ಲದೆ ಹೋಗಬಹುದು. ತೀರ ಅತಿರಿಕ್ತ ಸಂದರ್ಭಗಳಲ್ಲಿ ಅಂತಹ ವ್ಯಕ್ತಿಗೆ ತನ್ನ ದೇಹ ಸಹ ತನ್ನದಲ್ಲ ಎನ್ನಿಸಿಬಿಡಬಹುದು.

ಪರಕೀಯತೆಯನ್ನು ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಪರಿಗಣಿಸುವುದಾದಲ್ಲಿ, ವ್ಯಕ್ತಿಗೆ ತನ್ನೊಡನಿರುವ ಸಂಬಂಧದಿಂದ ಸಮಾಜದೊಂದಿಗೆ ಅವನಿಗಿರುವ ಸಂಬಂಧಕ್ಕೆ ಬರಬೇಕಾಗುತ್ತದೆ. ಸಮಾಜ ಹಾಗೂ ಸಾರ್ವಜನಿಕ ಸಂಸ್ಥೆಗಳೊಂದಿಗೆ ವ್ಯಕ್ತಿಯ ಹೊಂದಾಣಿಕೆ ಸಾಧ್ಯವಿಲ್ಲದಿದ್ದಾಗ ಅವನು ಪರಕೀಯನಾಗುತ್ತಾನೆ. ಅಂತಹ ವ್ಯಕ್ತಿಗೆ ಸಮಾಜ ಮತ್ತು ಅದರ ಸಂಸ್ಥೆಗಳು ತನ್ನ ವ್ಯಾಪ್ತಿಗೆ ಮೀರಿದವು, ತನ್ನ ಗ್ರಹಿಕೆಗೆ ಸಿಕ್ಕದಂತಹವು ಎನ್ನಿಸುತ್ತದೆ. ಅವುಗಳ ವ್ಯವಹಾರಗಳಲ್ಲಿ, ಆಗುಹೋಗುಗಳಲ್ಲಿ ಅವನು ಸಕ್ರಿಯವಾಗಿ ಭಾಗವಹಿಸಲಾರ. ತನ್ನಲ್ಲಿ ತಾನು ಪರಕೀಯನಾದವನು ತನ್ನತನವನ್ನು (self-identity) ಕಳೆದುಕೊಳ್ಳುತ್ತಾನೆ. ಸಾಮಾಜಿಕವಾಗಿ ಪರಕೀಯನಾದವನಿಗೆ ಇಂತಹ ನಷ್ಟವೇನಿಲ್ಲವಾದರೂ ಭಾಗವಹಿಸುವಿಕೆ ಇಲ್ಲವಾಗುವುದರಿಂದ ಆ ಮೂಲಕ ಸಿಕ್ಕುವ ಸಮಾಜದ ಮೇಲಣ ಅಲ್ಪ ಸ್ವಲ್ಪ ಹಿಡಿತವೂ ಇಲ್ಲವಾಗುತ್ತದೆ. ತಾನು ಬೇರೆ, ಸಮಾಜ ಬೇರೆ ಎಂಬ ಭಾವವನ್ನು ಗೆಲ್ಲುವುದು ಅವನಿಗೆ ಸಾಧ್ಯವಾಗುವುದಿಲ್ಲ. ಸಮಾಜದಲ್ಲಿ ತಾನು ನಿರ್ವಹಿಸಬೇಕಾದ ಪಾತ್ರ ಇಲ್ಲದೆ, ಚಲಾಯಿಸಬಹುದಾದ ಹಕ್ಕಾಗಲಿ, ಗಳಿಸಬಹುದಾದ ಸ್ಥಾನವಾಗಲಿ ಅವನಿಗೆ ಪ್ರಾಪ್ತವಾಗುವುದಿಲ್ಲ. ತಾನೇ ಸಮಾಜವನ್ನು ದೂರ ಮಾಡಿದ್ದರೂ, ಸಮಾಜವೇ ತನ್ನನ್ನು ದೂರ ಮಾಡಿದೆ ಎಂದೇ ಅವನ ಅನಿಸಿಕೆ. ಅನ್ಯತೆಯನ್ನು ಗೆಲ್ಲಲಾರದ ಇವನ ಪರಿಸ್ಥಿತಿ ಸಮಾಜಕ್ಕೆ ಮೊದಲು ದೋಷವಾಗಿ, ಆಮೇಲೆ ಕಾಯಿಲೆಯಾಗಿ ಕಾಣಿಸುತ್ತದೆ. ವ್ಯಕ್ತಿಯ ಈ ನೆನೆಗುದಿಗೆ ತಾನೂ ಕೂಡ ಹೊಣೆ ಎಂದು ಸಮಾಜಕ್ಕೆ ಅನ್ನಿಸುವುದೇ ಇಲ್ಲ.

ಹೀಗಾದಾಗ ವ್ಯಕ್ತಿ ವಾಸ್ತವದೊಂದಿಗೆ ಸಂಬಂಧವನ್ನು ಕಳೆದುಕೊಳ್ಳುತ್ತಾನೆ; ನಂತರ ವಾಸ್ತವದ ವಾಸ್ತವಿಕತೆಯನ್ನೇ ಪ್ರಶ್ನಿಸುತ್ತಾನೆ. ಅವನ ವೈಯಕ್ತಿಕ ಬದುಕು "ಬಹುಜನ ನಡೆವುದೆ ದಾರಿ"ಯಿಂದ ಬೇರ್ಪಟ್ಟು, ಭಿನ್ನವಾಗುತ್ತದೆ. ಹೀಗೆ ವ್ಯಕ್ತಿಚೇತನದ ವೈಯಕ್ತಿಕ ಪಥವೂ ಸಾಮಾಜಿಕ ಪಥವೂ ಬೇರೆ ಬೇರೆ ಎಂದು ತೋರಿದರೂ ಪರಸ್ಪರ ಸಂಬಂಧಿಸಿದುವುಗಳಾಗಿವೆ; ಸಮಾಜದಿಂದ ವ್ಯಕ್ತಿಯ ನಿರ್ಮಾಣ ಮತ್ತು ವ್ಯಕ್ತಿಯಿಂದ ಸಮಾಜದ ನಿರ್ಮಾಣ ಹೀಗೆ ಇವೆರಡರಲ್ಲಿ ಪರಸ್ಪರ ಸಂಬಂಧವಿದೆ.

ವ್ಯಕ್ತಿ ತನ್ನ ವಿಶಿಷ್ಟವಾದ ಗುಣಸಮುದಾಯವನ್ನೊಳಗೊಂಡ ಆತ್ಮಾಭಿವ್ಯಕ್ತಿಯನ್ನು ನಿರಂತರವಾಗಿ ಅಂತಃಸ್ಫೂರ್ತಿಯಿಂದ ಕಾಪಾಡಿಕೊಂಡು ಬರಬೇಕೆಂದು ಸಮಾಜವು ನಿರೀಕ್ಷಿಸುತ್ತದೆ. ಹಾಗೆಯೇ ವ್ಯಕ್ತಿಯು ತಾನು ತನ್ನತನದ ಮಿತಿಗಳನ್ನು ಮೀರಿ ಸಮಾಜ ಜೀವನದಲ್ಲಿ ನೆಲೆಗೊಳ್ಳಲು, ಸಾಮಾಜಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಉಪಯುಕ್ತವಾಗಿಸಲು ತನ್ನ ಅಳಿಲು ಸೇವೆಯನ್ನು ಸಲ್ಲಿಸುವುದಕ್ಕೆ ಸಮಾಜವು ಅನುವುಮಾಡಿಕೊಡಬೇಕೆಂದು ನಿರೀಕ್ಷಿಸುತ್ತಾನೆ. ಸಮಾಜದಲ್ಲಿ ಬೆರೆಯುವುದರಿಂದ ವ್ಯಕ್ತಿ ತನ್ನ ವಿಶೇಷ "ವ್ಯಕ್ತಿತ್ವ"ವನ್ನೇನೂ ಕಳೆದುಕೊಳ್ಳುವುದಿಲ್ಲ; ತನ್ನ ಅಸ್ತಿತ್ವವನ್ನು ಭಾಗಶಃ ತೊಡಗಿಸಿ, ಸಮಾಜದ ಮುನ್ನಡೆಗೆ ಕಾರಣನಾಗಬಯಸುತ್ತಾನೆ.

"ಉತ್ಪಾದನೆ" ಮಾಡುವ ವ್ಯವಸಾಯಗಾರ ಅಥವಾ ಕಾರ್ಖಾನೆ ಕಾರ್ಮಿಕ ತನ್ನಿಂದಾಗಿ ಜನಿಸುವ ಉತ್ಪನ್ನ ವಸ್ತುವಿಶೇಷದಿಂದಾಗಿ ವಿಶಿಷ್ಟನಾಗುತ್ತಾನೆಯಾದರೂ, ಆ ವಸ್ತು ಅವನ ಕೈಯಿಂದ ಇನ್ನೊಬ್ಬನ ಕೈಗೆ ಸೇರಿದಮೇಲೆ ಆ ಕರ್ಮಿ ಅನ್ಯನಾಗುತ್ತಾನೆ, ಪರಕೀಯನಾಗುತ್ತಾನೆ. ಇದು ಹೇಗೆಂದು ಮೊಟ್ಟಮೊದಲು ಚಿಂತನೆ ನಡೆಸಿದವನು ಜರ್ಮನಿಯ ಕಾರ್ಲ್ ಮಾರ್ಕ್ಸ್. ಕಾರ್ಮಿಕನು ಪರಕೀಯನಾಗಲು ಕಾರಣ ಕರ್ಮವು ಯಾಂತ್ರಿಕವಾಗಿರುವುದೇ. ಅಡಿಕೆಯ ಗುಣಮಟ್ಟ ಅದಕ್ಕೆ ಯಾರು ಯಜಮಾನರು, ಯಾರು ಬೇಸಾಯ ಮಾಡಿದ್ದು, ಯಾರು ಕೊನೆ ತೆಗೆದದ್ದು ಇತ್ಯಾದಿಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಕರ್ಮ ಕಾರ್ಮಿಕನಿಂದ ಹೊರತಾಗಿರುವಾಗ ಕಾರ್ಮಿಕನ ಸೃಷ್ಟಿಕ್ರಿಯೆಗೆ, ಕಲೆಗೆ ಅವಕಾಶವೆಲ್ಲಿ? ಆದ್ದರಿಂದಲೇ ಉತ್ಪನ್ನ ವಸ್ತುವಿನೆದುರು, ಅದರ ವಾಣಿಜ್ಯ ಮೌಲ್ಯದೆದುರು ಅದನ್ನು ಉತ್ಪತ್ತಿಮಾಡಿದ ಕಾರ್ಮಿಕ ಪರಕೀಯನಾಗುತ್ತಾನೆ

**ಕಾರ್ಮಿಕನು ಹೆಚ್ಚು ಹೆಚ್ಚು ವಸ್ತುಗಳನ್ನು ಉತ್ಪತ್ತಿಮಾಡಿದಷ್ಟೂ ಅವನ ಬೆಲೆ ಕಡಮೆಯಾಗುತ್ತ ಹೋಗುತ್ತದೆ. ವಸ್ತುಜಗತ್ತಿನ ಮೌಲ್ಯ ಅಧಿಕವಾದಷ್ಟೂ ವ್ಯಕ್ತಿಯ ಮೌಲ್ಯ ಕಡಮೆಯಾಗುತ್ತದೆ. — *ಕಾರ್ಲ್ ಮಾರ್ಕ್ಸ್***

ಅಷ್ಟೇ ಅಲ್ಲ—ಅವನು ಅವನಾಗಿರುವಾಗ ಕೆಲಸ ಮಾಡಲಾರ, ಕೆಲಸ ಮಾಡುವಾಗ ಅವನು ಅವನಾಗಿರಲಾರ; ಆದ್ದರಿಂದ ಸಮಾಜದಲ್ಲಿ ಪರಕೀಯನಾಗಿರುವುದರ ಜೊತೆಗೆ ತನ್ನೊಳಗೂ ತಾನು ಅನ್ಯನಾಗುತ್ತಾನೆ. ಮಾಡಲೇಬೇಕಾಗಿ ಬಂದ, ಹೇರಲ್ಪಟ್ಟ ಕರ್ಮದಲ್ಲಿ ಸ್ವಾತಂತ್ರ್ಯ, ಸಂತೋಷ, ಸೃಜನಶೀಲತೆ ಸಾಧ್ಯವೇ? ಹೀಗಾದಾಗ ಕರ್ಮವು ಆವಶ್ಯಕತೆಗಳ ಪೂರೈಕೆಗಳ ಸಾಧನವಾಗುತ್ತದೆಯೇ ಹೊರತು ಅದೇ ಆವಶ್ಯಕತೆಯಾಗುವುದಿಲ್ಲ.

ಕರ್ಮ ಮತ್ತು ಕಾರ್ಮಿಕರ ನಡುವಣ ಈ ಸಂಬಂಧದ ವಿಕ್ಷಿಪ್ತತೆಗೆ ವಾಣಿಜ್ಯ ಕ್ಷೇತ್ರದ ಆರ್ಥಿಕ ಕಬಂಧಬಾಹುವನ್ನೂ ಸೇರಿಸಬೇಕು. ಇಲ್ಲಿ ಕರ್ಮ ಮಾನವನ ಅಭಿವ್ಯಕ್ತಿಯಾಗುವುದರ ಬದಲು ಮಾರಾಟದ ಸರಕಾಗುತ್ತದೆ, ಬದುಕಿ ಉಳಿಯುವ ಹೋರಾಟದ ಏಕೈಕ ಉಪಾಯವಾಗುತ್ತದೆ. ಈ ಗುರಾಣಿಯ ಹಿಂದಿರುವ ವ್ಯಕ್ತಿ ಪ್ರಕಾಶಕ್ಕೆ ಬರಲಾಗುವುದೇ ಇಲ್ಲ. ಹೀಗೆ ಪರಕೀಯತೆಗೆ ಕಾರಣಗಳೆಂದರೆ (೧) ಕರ್ಮವು ಕರ್ಮಿಯಿಂದ ಬೇರ್ಪಡುವುದು; (೨) ಕರ್ಮವು ಮಾರಾಟದ ಸರಕಾಗುವುದು; (೩) ಕರ್ಮಿಯು ತನ್ನದೇ ಕರ್ಮಕ್ಕೆ ದಾಸನಾಗುವುದು ಮತ್ತು (೪) ಆರ್ಥಿಕ ಪ್ರಾಮುಖ್ಯವು ಕಲೆಯನ್ನೂ ಸೃಜನಶೀಲತೆಯನ್ನೂ ದೂರಮಾಡುವುದು. ವಂಚಕನೊಬ್ಬನು ಹಣದ ಪ್ರಭಾವದಿಂದ ಪ್ರಾಮಾಣಿಕ ಸಮಾಜಸೇವಕನೆನ್ನಿಸಿಕೊಳ್ಳಬಹುದಾದರೆ ಪ್ರಾಮಾಣಿಕ ಪರೋಪಕಾರಿಗೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲ. "ಛೇ, ಪಾಪದವ" ಎನ್ನುತ್ತಲೇ ಸಮಾಜ ಅವನನ್ನು ಇನ್ನಷ್ಟು ಶೋಷಿಸುತ್ತದೆ.

ಮಾರಾಟಕ್ಕಿರುವ ಕುಶಲಕರ್ಮದ ಬೆಲೆ ಕೌಶಲ್ಯ-ಕಲೆಗಳನ್ನಾಧರಿಸುವುದರ ಬದಲು ಕುಶಲ ಕರ್ಮಿಗಳ ಸಂಖ್ಯೆಯ ಮೇಲೆ ನಿರ್ಧಾರಿತವಾಗುತ್ತದೆ. ಹೆಚ್ಚು ಕರ್ಮಿಗಳು ಲಭ್ಯವಾದಂತೆ ಕರ್ಮದ ಬೆಲೆ ಇಳಿಯುತ್ತದೆ. ಇದೇ ಶೋಷಣೆಯ ಮೂಲ. ಇದರಿಂದ ಕರ್ಮಿ ಬಡವನಾಗುತ್ತ ಹೋಗುತ್ತಾನೆ; ಅವನ ಕೆಲಸವನ್ನು ಕೊಳ್ಳುವವ ಶ್ರೀಮಂತನಾಗುತ್ತ ಹೋಗುತ್ತಾನೆ. ಕೆಲಸದ ಅವಧಿ, ಉತ್ಪನ್ನದ ಪ್ರಮಾಣ—ಇಂಥವೇ ನಿರ್ಣಾಯಕವಾಗುತ್ತವೆ. ಬದುಕಿನ ಆವಶ್ಯಕತೆಗಳಿಗಾಗಿ ಕರ್ಮಕೌಶಲವನ್ನು ಮಾರಬೇಕಾಗಿ ಬಂದವನಿಗೆ ಸಾಮಾಜಿಕ ಸ್ವಾತಂತ್ರ್ಯ, ಶ್ರೇಷ್ಠತೆಗಳೂ ಇಲ್ಲ; ತನ್ನೊಳಗೂ ತನಗೆ ಈ ಭಾವನೆಗಳು ಸಾಧ್ಯವಾಗದೆ ಅತೃಪ್ತನಾಗಬೇಕಾಗುತ್ತದೆ. ಮಾರ್ಕ್ಸ್ ಪ್ರಕಾರ ಪರಕೀಯತೆಗೆ ಮುಖ್ಯ ಕಾರಣವೆಂದರೆ —ಸಮಾಜವು ವ್ಯಕ್ತಿಗೆ (ಅವನ ಕರ್ಮಕ್ಕೆ ಅನುಸಾರವಾಗಿ) ಕೊಡುವ ಸ್ಥಾನದಲ್ಲಿ ಅವನು ಇರಬೇಕಾಗುವುದು ಮತ್ತು ಅಂತಹ ಸ್ಥಾನಕ್ಕೆ ಸಮಾಜವು ನಿರ್ದೇಶಿಸುವ ನೀತಿವಂತಿಕೆಯನ್ನು ಒಪ್ಪಿಕೊಳ್ಳಬೇಕಾಗಿ ಬರುವುದು. ಉದಾಹರಣೆಗೆ, ಸಾಮಾನ್ಯವಾಗಿ ನಿರೀಕ್ಷಿಸಬಹುದಾದಂತೆ ಕಾರ್ಖಾನೆ ಕಾರ್ಮಿಕರು ಕುಡುಕರಾಗಿರುತ್ತಾರೆ, ಅಭಿಯಂತ ಆರಕ್ಷಕ ಅರಣ್ಯ ರಕ್ಷಕ ಇತ್ಯಾದಿ ಜನ ಲಂಚಕೋರರಾಗಿರುತ್ತಾರೆ ಮತ್ತು ಉಪಾಧ್ಯಾಯ ದುರ್ವ್ಯಸನಗಳಿಲ್ಲದ ಶೀಲವಂತನಾಗಿರುತ್ತಾನೆ ಇತ್ಯಾದಿ. ಸೂಕ್ಷ್ಮಸಂವೇದಿಯೊಬ್ಬ ಕಾರ್ಖಾನೆ ಕಾರ್ಮಿಕನಾದರೆ, ಶೀಲವಂತ ಆದರ್ಶವ್ಯಕ್ತಿ ಮರಾಮತ್ತು ಇಲಾಖೆಯಲ್ಲಿದ್ದರೆ, ಭ್ರಷ್ಟ ದುರ್ವ್ಯಸನಿ ಉಪಾಧ್ಯಾಯ ವೃತ್ತಿಯಲ್ಲಿದ್ದರೆ? ಸಮಾಜದ ನಿರೀಕ್ಷೆಯಂತೆ ಇರಲಾಗದೆ ತನ್ನೊಳಗೆ ತಾನು ಪರಕೀಯನಾಗಬೇಕಾಗುತ್ತದೆ.

ವ್ಯಕ್ತಿ ಮತ್ತು ಪ್ರಕೃತಿಯೊಡನಿರುವ ನಿಮ್ಮ ಸಂಬಂಧವು ನಿಮ್ಮ ವಿಶಿಷ್ಟ ಅಭಿವ್ಯಕ್ತಿಯಾಗಿರಬೇಕು, ಅದು ನಿಮ್ಮ ಇಚ್ಛಾವಿಷಯಕ್ಕೆ, ನಿಮ್ಮ ನಿಜವಾದ ವೈಯಕ್ತಿಕ ಜೀವನಕ್ಕೆ ಅನುಗುಣವಾಗಿರಬೇಕು. — *ಕಾರ್ಲ್ ಮಾರ್ಕ್ಸ್*

ಸಮಾಜವು ವ್ಯಕ್ತಿಯನ್ನು ಉದ್ದೇಶಸಾಧನೆಯ ಮಾಧ್ಯಮವನ್ನಾಗಿ, ಅಷ್ಟೇ ಏಕೆ, ಸಾಮಾಜಿಕ ಸಂಸ್ಥೆಗಳ ತೀರ್ಮಾನವನ್ನು ಜಾರಿಗೆ ತರುವ ಮಾಧ್ಯಮವನ್ನಾಗಿ, ಬಳಸಿಕೊಂಡಾಗ ವ್ಯಕ್ತಿ ಪರಕೀಯನಾಗಬೇಕಾಗುತ್ತದೆಯೇನೋ ಸರಿ. ಆದರೆ ವ್ಯಕ್ತಿ ಸಂಪೂರ್ಣವಾಗಿ ಈ ಮಾಧ್ಯಮದಲ್ಲಿ ಐಕ್ಯವಾಗಬೇಕಾದ ಅಗತ್ಯವೇನಿಲ್ಲ. ಸಮಾಜದ ತಾಳಕ್ಕೆ ಸಂಪೂರ್ಣವಾಗಿ ಕುಣಿಯುವ ವ್ಯಕ್ತಿ ಇರಲು ಅಸಾಧ್ಯ. ವ್ಯಕ್ತಿಯ ಅಂತಃಸ್ಫುರಣ ಯಾವುದೇ ಸಾಮಾಜಿಕ ಸಂಸ್ಥೆಯ ಆಗುಹೋಗುಗಳಿಂದ ಮುಳುಗಲೂ ಆರದು, ಬೆಳಗಲೂ ಆರದು. ಇಡಿಯ ಚೇತನ ಅಂತಃಸ್ಫೂರ್ತಿಯಿಂದಲೇ ತುಂಬಿಹೋಗುವುದೂ ಅಸಾಧ್ಯ. ಮಾತಿನ ಮೂಲಕವಾಗಲಿ, ಬರಹದ ಮೂಲಕವಾಗಲಿ ಅವನು ತನ್ನ ಅಂತಃಸ್ಫೂರ್ತಿಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲಾರ. ಭಾಷೆ ಅಲ್ಪ ಸ್ವಲ್ಪ ಅವನದ್ದೇ ವಿಶೇಷವನ್ನು ಸಂವಹಿಸಬಹುದಾದರೂ, ಭಾಷೆಯೂ ಅವನಿಗೆ ಎರವಲು ಬಂದದ್ದೇ ಆದ್ದರಿಂದ ವ್ಯಕ್ತಿ ಭಾಷೆಯಿಂದಲೂ ಅನ್ಯನಾಗುತ್ತಾನೆ. ತನ್ನನ್ನು ತಾನು ಅಭಿವ್ಯಕ್ತಿಗೊಳಿಸಲು ಇರುವ ಏಕೈಕ ಉಪಕರಣವೂ ಅವನದ್ದಲ್ಲ! ಸಮಾಜದ ಪರಿಷ್ಕಾರವೂ ವ್ಯಕ್ತಿಯ ಅಂತಃಸ್ಫುರಣವೂ ಒಂದಾಗುವುದು ಸಾಧ್ಯವೂ ಅಲ್ಲ, ಮಾನವೀಯ ಸೃಜನಶೀಲತೆಯ ದೃಷ್ಟಿಯಿಂದ ಅದು ಅಪೇಕ್ಷಣೀಯವೂ ಅಲ್ಲ. ವೈಯಕ್ತಿಕತೆ ಎಲ್ಲಿ ಇರುವುದಿಲ್ಲವೋ ಅಲ್ಲಿ ಪರಕೀಯತೆ ಇರುತ್ತದೆ.

ಶೋಷಿತ ವ್ಯಕ್ತಿಯ ಪರಕೀಯತೆ ಅಸಹಾಯಕತೆಗಳು ಕೆಡುಕುಗಳಾದರೂ, ಸಮಾಜರಚನೆ ಮತ್ತು ಸಂಸ್ಥೆಗಳ ಸ್ಥಾಪನೆಯಲ್ಲಿ ಪಾತ್ರವಹಿಸುವ ವ್ಯಕ್ತಿಗಳ ಪರಕೀಯತೆ (ಒಳ್ಳೆಯದಲ್ಲದಿದ್ದರೂ) ಕೆಡುಕಂತೂ ಅಲ್ಲ. ಸಂಸ್ಥೆಗಳಿಗಾಗಿ ದುಡಿಯುವುದು, ದಾನಮಾಡುವುದು ಇತ್ಯಾದಿಗಳೂ ಭಾಷೆ ಹೇಗೋ ಹಾಗೆ ವ್ಯಕ್ತಿಯ ಅಂತಃಸ್ಫುರಣದ ಅಭಿವ್ಯಕ್ತಿಗಳೇ. ಸಮಾಜಕ್ಕಾಗಿ ಅರಳಿಕೊಂಡವನ ಪರಕೀಯತೆ ಅವನ ಅಹಂಕಾರವನ್ನು ಕಡಿಮೆಮಾಡಿ, ತ್ಯಾಗೀಶ್ವರನ ಪಟ್ಟಕಟ್ಟಿ ಧನ್ಯತೆಯನ್ನುಂಟುಮಾಡುವುದರಿಂದ ಅದು ಅವನಿಗೆ

ಮನೋರೋಗವಾಗಿ ಪರಿಣಮಿಸುವುದಿಲ್ಲ. ಬದಲಿಗೆ ಅಂತಃಸ್ಫುರಣದ ಆಸ್ಫೋಟನೆಗೆ ಒಂದು ಅರ್ಥ, ಒಂದು ಗುರಿ, ಒಂದು ಪ್ರಯೋಜಕ ದೃಷ್ಟಿ ಇವುಗಳನ್ನು ಕೊಡುತ್ತದೆ. ಸಂಸ್ಥೆ ಸಮಾಜ ರಾಜ್ಯ ದೇಶ ಇತ್ಯಾದಿ ಒಕ್ಕೂಟಗಳೆಲ್ಲ ಮಾನವನಿರ್ಮಿತಿಗಳೆ, ಮಾನವನ ರೂಪರಹಿತ ಅಂತಃಸ್ಫುರಣದ ಸಾಕಾರಗಳೆ. ತಮ್ಮನ್ನು ಸೃಜಿಸಿದ ಎಲ್ಲ ವ್ಯಕ್ತಿಗಳನ್ನೂ ಮೀರಿ ನಿಂತ ಈ ಸಾಕಾರಗಳು ಮುಂಬರುವ ಸಮಾಜಕ್ಕೆ, ವ್ಯಕ್ತಿಗಳಿಗೆ ಸಂಪ್ರದಾಯದ, ನಡತೆಯ, ಧೋರಣೆಯ ಮೇಲ್ಪಂಕ್ತಿಗಳನ್ನು ಹಾಕಿಕೊಡುತ್ತವೆ. ವ್ಯಕ್ತಿಗಳು ತಮ್ಮದೇ ಮಿತಿಗಳನ್ನರಿತುಕೊಂಡು ಅವುಗಳಿಂದ ಹೊರಬರುವ ಹಾಗೂ ಇತರರನ್ನು ಪರಿಗಣಿಸುವ ಪ್ರಕ್ರಿಯೆಗೆ ಅವು ಸೂಕ್ತ ಭೂಮಿಕೆಯನ್ನೊದಗಿಸುತ್ತವೆ. ವ್ಯಕ್ತಿಯ ಪ್ರಕಾಶವನ್ನು ಅವನ ಮೇಲೇ ಪ್ರತಿಫಲಿಸುವ ಕನ್ನಡಿಗಳಿವು: ಆದರೆ ಈ ಕನ್ನಡಿಗಳನ್ನು ನಿರ್ಮಿಸುವುದೂ ವ್ಯಕ್ತಿಯ ಅಂತಃಸ್ಫುರಣವೇ. ಭಾಷೆ ಕಾವ್ಯ ರಾಜ್ಯಾಂಗ ಕಾನೂನು ಕಲೆ ವಿಜ್ಞಾನ ಎಲ್ಲವೂ ಮಾನವನ ಅಂತಃಸ್ಫೂರ್ತಿಜನ್ಯವೇ ಆದರೂ ನಮಗೆ ಅವು ಕರತಲಾಮಲಕವಾಗುವ ತನಕ ಪರಕೀಯವೆ. ಮುದ್ದಣ, ಮೆಕಾಲೆ, ಮ್ಯಾಕ್ಸ್‌ಮುಲ್ಲರ್, ಮಹಾತ್ಮಾಗಾಂಧಿ, ಐನ್‌ಸ್ಟೈನ್ ಎಲ್ಲರಿಗೂ ಅಂತಃಸ್ಫುರಣದ ಅಭಿವ್ಯಕ್ತಿಗೆ ಮೂಲಶಿಕ್ಷಣ ಮತ್ತು ಶಿಷ್ಟಸಂಪ್ರದಾಯಗಳೇ ತಳಹದಿಯಾಗಿದ್ದುವು ತಾನೆ? ಅಂತಹ ತಳಹದಿಯ ಮೇಲೆ ನಿಲ್ಲದ ದಿಢೀರ್ ಅಂತಃಸ್ಫುರಣಕ್ಕೆ ಮೂಲಭೂತ ಬೆಲೆಯೇ ಇಲ್ಲವಾಗುತ್ತದೆ. ಸಮಾಜದ ರಚನೆಗಳು ವ್ಯಕ್ತಿಗೆ ಪರಕೀಯವಾದರೂ, ಅವು ಇತ್ಯಾತ್ಮಕ ಅಭಿವ್ಯಕ್ತಿಗಳು ಮತ್ತು ಅರ್ಥವತ್ತಾದ ಉತ್ಪಾದನೆಗಳು ಎಂಬುದನ್ನು ಅಲ್ಲಗಳೆಯಲಾಗದು—ಇನ್ನೊಂದು ಅರ್ಥದಲ್ಲಿ ಅವು ಸ್ವತಂತ್ರ ಮಾನವನ ವಿಕ್ಷಿಪ್ತತೆಗಳಾಗಿದ್ದರೂ ಸಹ.

ಪರಕೀಯವೆನಿಸುವ ಸಂಗತಿಗಳ ಬಗ್ಗೆ ವಿರೋಧ ಸಹಜವೇ. ಕಳ್ಳತನಕ್ಕೆ ಹೊರಡುವವನು ಚಂದ್ರನನ್ನು ದ್ವೇಷಿಸಿದರೂ, ಅದರ ಅಪ್ರಯೋಜಕತೆಯನ್ನರಿತು ಚಂದ್ರನಿಲ್ಲದ ದಿನಗಳನ್ನೇ ಆರಿಸಿಕೊಳ್ಳುವಂತೆ, ಯಾವುದರೆದುರು ನಾವು ಏನೂ ಮಾಡಲಾರೆವೋ ಆ ಪ್ರಕೃತಿಯ ಸಂಗತಿ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತೇವೆ. ಆದರೆ ಮಾನವನಿರ್ಮಿತ ರಚನೆಗಳು ಅತಿರಿಕ್ತವಾಗಿ ಪರಣಮಿಸಿ ಅನ್ಯವಾದಾಗ ಅವುಗಳನ್ನು ವಿರೋಧಿಸುವದರಲ್ಲಿ ತಪ್ಪೇನಿಲ್ಲ. ಉದಾಹರಣೆಗೆ, ಪ್ರಜಾಪ್ರಭುತ್ವದ ಛತ್ರದಡಿ ಸರ್ವಾಧಿಕಾರ—ನಾವೇ ಆರಿಸಿದ ಪ್ರತಿನಿಧಿಗಳು ನಮಗೇ ಅತಿರಿಕ್ತರಾಗಿ ಪರಕೀಯರಾಗುವುದು. ಸಮಾಜದ ವಿರೋಧ ಆಗ ಸ್ವಾಗತಾರ್ಹ! ಬಹುಜನರನ್ನು ಅನ್ಯರನ್ನಾಗಿಸಿ, ಅವರು ಒಪ್ಪಿರುವ ರಾಜ್ಯಾಂಗವನ್ನು ಅಪಮಾರ್ಗಕ್ಕೆಳೆಸುವ ಅಂಥ ವೈಯಕ್ತಿಕ ಅತಿರಿಕ್ತವನ್ನು ವಿರೋಧಿಸುವುದು ಕರ್ತವ್ಯವೇ ಹೌದು; ರಾಜ್ಯಾಂಗವನ್ನು ಕಟ್ಟುವಷ್ಟೇ ರಚನಾತ್ಮಕವೂ ಹೌದು.

ಹೀಗೆ ಇತರರು ನಮ್ಮನ್ನು ಪರಕೀಯರನ್ನಾಗಿಸಲು ಅವಕಾಶವಿಲ್ಲದಂತೆ ನಾವೇ ನಮ್ಮ ಅನ್ಯತೆ ವೈಯಕ್ತಿಕತೆಗಳನ್ನು ಸಾಮಾಜಿಕ ರಚನೆಯ ಚೌಕಟ್ಟಿನೊಳಗೇ ಕಾಯ್ದುಕೊಳ್ಳಬೇಕಾಗುತ್ತದೆ. ಅಂತೆಯೇ ಅಂತರಂಗವು ಅಪಮಾರ್ಗ ಹಿಡಿಯದಂತೆ ಅಂತಃಸ್ಫುರಣವನ್ನೂ ಸಹ. ಸಂಘಸಂಸ್ಥೆಗಳಿಗೆ ಅವನ್ನು ನಡೆಸುವ ಪದಾಧಿಕಾರಿಗಳಿಗಿಂತ ಭಿನ್ನವಾದ ವ್ಯಕ್ತಿತ್ವ ಇರಲಾರದು. "ಸಂಘೇ ಶಕ್ತಿಃ ಕಲೌ ಯುಗೇ" ಎಂಬುದನ್ನನುಸರಿಸಿ ಆ ಸಂಘದ ಬಲವನ್ನು ಬಳಸಿಕೊಂಡು ಅವರು ಇತರರಿಗಿಂತ ಹೆಚ್ಚು ಕ್ರೂರ ಶೋಷಕರಾಗುವ ಸಾಧ್ಯತೆಯಿದೆ; ಉದಾಹರಣೆಗಳು ಬೇಕಾದಷ್ಟಿವೆ. ಸಾಮಾನ್ಯವಾಗಿ ಜನರನ್ನು (ಅಪರೂಪವಾಗಿ ಇಡಿಯ ಸಂಘವನ್ನೇ ಸಮಾಜದಲ್ಲಿ) ಪರಕೀಯಗೊಳಿಸುವ ಇಂಥವರನ್ನು ನಿಯಂತ್ರಿಸುವುದು ಯಾರೊಬ್ಬರಿಗೂ ಕಷ್ಟವೇ. ಇವರಿಂದಾಗಿ ಸಂಘಕ್ಕೂ ಸಮಾಜಕ್ಕೂ ನಡುವಣ ಬಿರುಕು ದಿನದಿನಕ್ಕೂ ದೊಡ್ಡದಾಗುತ್ತ ಹೋಗುತ್ತದೆ. ಇವರಿಂದಾಗಿ ಸಂಘಕ್ಕೆ ಆರೋಪಿಸಲ್ಪಡುವ ಈ ಕಾಠಿಣ್ಯವನ್ನು ನಾವು ವಿರೋಧಿಸಬೇಕೇ ಹೊರತು ಸಂಘದ ರಚನೆಯನ್ನೇ ಅಲ್ಲ. ವ್ಯಕ್ತಿಗೂ ಸಂಘಕ್ಕೂ ನಡುವೆ ಇರುವ ಸಹಜ ಪರಕೀಯತೆಯನ್ನು ಹೆಚ್ಚಿಸುವುದು ಈ ಕಾಠಿಣ್ಯ.

> ಎಲ್ಲಿಯವರೆಗೆ ಯಾವನೇ ವ್ಯಕ್ತಿಯು ನನಗಿಂತ ಸಂಪೂರ್ಣ ಬೇರೆ, ಅವನು ನನಗೆ ಪರಕೀಯ ಎಂದು ನನಗೆ ಭಾವನೆಯಿರುತ್ತದೊ ಅಲ್ಲಿಯವರೆಗೆ ನನಗೆ ನಾನೇ ಪರಕೀಯನಾಗಿರುತ್ತೇನೆ. — *ಎರಿಕ್ ಫ್ರೋಮ್ (Erich Fromm)*

ಕೊನೆಯದಾಗಿ, ಈ ಪರಕೀಯತೆಯು ವ್ಯಕ್ತಿಯ ಭಾವಪರವಶತೆಯ ಒಂದು ರೂಪಾಂತರವೂ ಆಗಿರುವುದು ಸಾಧ್ಯ. ತನ್ನ ಸಹಜ ಮಿತಿಯನ್ನು ಮೀರಿ ಹೋಗುವ ವ್ಯಕ್ತಿಗೆ ಇಂಥ ಸ್ಥಿತಿ ಪ್ರಾಪ್ತವಾಗಬಹುದು. ಭೌತಾತೀತ ದೃಷ್ಟಿಯಲ್ಲಿ ಇಂಥ ಪರಕೀಯತೆಯು ಪ್ರಾಪಂಚಿಕತೆಯಿಂದ ಬೇರ್ಪಟ್ಟು ದೈವಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಲಕ್ಷಣವೂ ಆಗಿರಬಹುದು. ಅಥವಾ ಲೌಕಿಕ ದೃಷ್ಟಿಯಲ್ಲಿ ಇದು ವ್ಯಕ್ತಿಗೆ ತನ್ನ ನಂಬಿಕೆಗಳ ಮೇಲಣ, ತಾನು ಕಟ್ಟಿ ಬೆಳೆಸಿದ ಅಥವಾ ಸೇರಿ ಒಂದಾಗಿರುವ ಸಂಘದ ಮೇಲಣ ಭಾವತೀವ್ರತೆ ಅಥವಾ ಭಾವಾವೇಶವೂ ಆಗಿರಬಹುದು. ಅದ್ವೈತದೃಷ್ಟಿಯಲ್ಲಿ ಅದು ತನ್ನ ಅಂತರಾತ್ಮದೊಂದಿಗೆ ಏಕೀಭವಿಸುವುದರಿಂದ ಉಂಟಾಗಿರಬಹುದು. ಭಕ್ತಿಭಾವದ ದೃಷ್ಟಿಯಲ್ಲಿ ಅದು ಅತೀತವಾದೊಂದು ವಿಶ್ವಚೈತನ್ಯದೊಂದಿಗೆ ಐಕ್ಯಹೊಂದಿದ್ದರಿಂದ ಉಂಟಾಗಿರಬಹುದು; ಇತ್ಯಾದಿ. ಸಂಕುಚಿತ ಸಾಮಾಜಿಕ ದೃಷ್ಟಿಯಿಂದ ಇದನ್ನು ಪರಕೀಯತೆ ಎಂದು ಪರಿಗಣಿಸಬಹುದಾದರೂ ವ್ಯಕ್ತಿಯ ದೃಷ್ಟಿಯಿಂದ ಹಾಗೆ ಹೇಳುವಂತಿಲ್ಲ, ಏಕೆಂದರೆ ಇಲ್ಲಿ ವ್ಯಕ್ತಿಗೆ ಪರಕೀಯ ಪ್ರಜ್ಞೆ ಇರುವುದಿಲ್ಲ. ಇಂತಹ ಭಾವನಾತ್ಮಕ ಪರಕೀಯತೆಯನ್ನು ಸಾಮಾಜಿಕ ಪರಿಸ್ಥಿತಿಯಲ್ಲಿ ಅನ್ವಯಿಸಲು ಬರುವುದಿಲ್ಲ—ಏಕೆಂದರೆ ಯಾವುದೇ ಸಾಮಾಜಿಕ ರಚನೆಯ ವ್ಯಕ್ತಿಸಮುದಾಯವು ಇಂಥದೊಂದು ಐಕ್ಯವನ್ನು ಹೊಂದುವುದು ಅಸಾಧ್ಯ.

ಇಡೀ ಪ್ರಪಂಚವನ್ನು ನಿನ್ನದಾಗಿಸುವುದನ್ನು ಕಲಿ. ಯಾರೂ ಪರಕೀಯರಲ್ಲ, ಮಗು. ಪ್ರಪಂಚ ನಿನ್ನದೇ. — ಶ್ರೀಶಾರದಾದೇವಿ.